ಯವರನ್ನು ಕೂಡ ಕರೆಸಿಕೊಂಡರು. ಈ ಆಸ್ಫೋಟನೆಯು ಪರಿಣಾಮವಾಗಿ ಶೌಚಾಗಾರದ ಕಿಟಕಿಗಳ ಗಾಜುಗಳು ಒಡೆದವು. ಮತ್ತು ಬಾಗಿಲಿನ ಹಲಗೆಗಳು ಹೊರಗೆ ಎಸೆಯಲ್ಪಟ್ಟವು. ಗೋಡೆಗಳಿಗೆ ಯಾವುದೇ ರೀತಿಯ ಹಾನಿ ಉಂಟಾಗಿಲ್ಲ. ಈ ಘಟನೆಯಿಂದ ರೂಪಾಯಿಗಳ ಲೆಕ್ಕದಲ್ಲಿ ೫೦೦ ರೂಪಾಯಿಗಳಿಗಿಂತ ಹೆಚ್ಚು ಹಾನಿ ಸಂಭವಿಸಿರಲಾರದು ಬ್ರಿಗೆಡಿಯರ್‌ರವರ ಅಭಿಪ್ರಾಯದಂತೆ ಆಸ್ಫೋಟನೆಗೆ ಉಪಯೋಗಿಸಲಾದ ವಸ್ತು ಬಾಂಬಿನಂತೆ ಕಂಪು ಬರುವುದಿಲ್ಲ. ಆದರೆ ಈ ವಸ್ತು ಬಯಲ್ಲಿರುವ ಕಲ್ಲು ಮತ್ತು ಬಂಡೆಗಳನ್ನು ಒಡೆಯಲು ಉಪಯೋಗಿಸುವ ಆಸ್ಫೋಟಕ ವಸ್ತು ಎಂದು ತಿಳಿದು ಬಂದಿದೆ. ಶೌಚಾಗಾರದ ಸುತ್ತಮುತ್ತು ಕನ್ನಡ ಮತ್ತು ಮರಾಠಿ ವೃತ್ತ ಪತ್ರಿಕೆಗಳ ಚೂರುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಪೋಲೀಸು ಶ್ವಾನಗಳು ಈ ಘಟನೆ ನಡೆದ ಸ್ಥಳದಿಂದ ವಾಸನೆ ಹಿಡಿದು ಶಿವ ಭವನವೃತ್ತಕ್ಕೆ ಹೋಗಿ ಅಲ್ಲಿ ನಿಂತು ಕೊಂಡವು. ಈ ಆಸ್ಫೋಟನೆ ನಡೆದ ಸ್ಥಳದಲ್ಲಿ ಕನ್ನಡ ಮತ್ತು ಮರಾಠಿ ವೃತ್ತ ಪತ್ರಿಕೆಗಳ ಚೂರು ಪಾಲಿಥಿನ್ ಕಾಗದ ಅಲ್ಯೂವಿನಿಯಂ ಚೂರುಗಳು ಮತ್ತು ಪ್ಲೆಸ್ಟ್ರಿಕ್ ಆವ್ಲ್ ಇವು ಬಿದ್ದಿದ್ದವು. ಬೆಳಗಾವಿ ನಗರದ ವೃತ್ತ ಆರಕ್ಷಕ ನಿರೀಕ್ಷಕರು ಅಪರಾಧ ಸಂ. ೯೭೬ ಇಂಡಿಯನ್ ಎಕ್ಸ್‌ಪ್ಲೋಸಿವ್ಸ್ ಸಬ್‌ಸ್ಟೆನ್ಸ್ ಅಧಿನಿಯಮ ೧೯೦೮ ಪ್ರಕರಣ ೪ರನ್ವಯ ದಾಖಲಿಸಿದ ಮೊಕದ್ದಮೆಯ ತನಿಖೆ ನಡೆಸುತ್ತಿದ್ದಾರೆ. ಈ ಘಟನೆಯು ವಿಧಾನಸಭಾ ಸದಸ್ಯರಾದ ಶ್ರೀ ಆರ್ ಎಸ್. ಮಾನೆಯವರನ್ನು ಬೆಂಗಳೂರಿನಲ್ಲಿ ಅವಘಾತ ಗೊಳಿಸಲಾಯಿತು ಎಂದು ಆಪಾದಿಸಲ್ಪಟ್ಟ ಪ್ರಕರಣದ ಬಗ್ಗೆ ಪ್ರತಿಭಟನೆ ನಡೆಸಲು ಎಂಇಎಸ್ ಕಾರ್ಯಕರ್ತರು ದಿನಾಂಕ ೨೨-೧-೧೯೮೬ ರಂದು ಆಚರಿಸಿದ ಬೆಳಗಾವಿ ಬಂದ್ ಸಮಯದಲ್ಲಿ ನಡೆದಿದೆ. ತನಿಖೆಯ ಸಮಯದಲ್ಲಿ ಈ ಕೆಳಕಂಡ ನಾಲ್ವರು ಆಪಾದಿತರನ್ನು ಮೇಲೆ ನಮೂದಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ ೨೩-೧-೧೯೮೬ ರಂದು ಬಂಧಿಸಲಾಗಿದೆ.

೧ ಶ್ರೀ ದೌಲತ್ ಮನೋಹರ್ ಮೋರೆ, ೨೩ ವರ್ಷ ಕಂಗ್ರಾಲ್‌ಗಲ್ಲಿ

೨ ನರೇಶ್ ಭೊನ್ನಪ್ಪ ಹಂಡ್ರೆ, ೧೯ ವರ್ಷ ಕಂಗ್ರಾಲ್‌ಗಲ್ಲಿ

೩ ಶೇಖರ್ ದತ್ತಾತ್ರೇಯ ಅಂಗಡಿ, ೩೦ ವರ್ಷ ಗೊಂಡಾಲಿ ಗಲ್ಲಿ

೪ ಜೀವನ ಮಾಧವ ರಾವ್ ಹಳದ್‌ಕರ್, ೨೮ ವರ್ಷ ಕೊತವಾಲ ಗಲ್ಲಿ

ಈ ಘಟನೆಯಲ್ಲಿ ವಶಪಡಿಸಿಕೊಳ್ಳಲಾದ ಮುರಿದ ಬಾಗಿಲಿನ ಹಲಗೆಯ ಚೂರುಗಳು, ಕನ್ನಡ ಮತ್ತು ಮರಾಠಿ ವೃತ್ತ ಪತ್ರಿಕೆಗಳ ಚೂರುಗಳು, ಕಪ್ಪು ಬಣ್ಣದ ಪುಡಿಯಿಂದ ಆವೃತ್ತವಾದ ಪಾಲಿಶ್ ಮಾಡಿದ ನೆಲಕ್ಕೆ ಹಾಸುವ ಹೆಂಚಿನ ಚೂರುಗಳು ಶೌಚಾಗಾರದ ಒಡೆದ ಬೇಸಿನ ಚೂರುಗಳು ಮತ್ತು ಪಾಲಿಥಿನ್ ಕಾಗದದ ಚೂರುಗಳು ಮುಂತಾದ ವಸ್ತುಗಳನ್ನು ಮಂಗಳೂರಿಗೆ ಸ್ಫೋಟಕಗಳ ತಜ್ಞರ ಅಭಿಪ್ರಾಯಕ್ಕಾಗಿ ಕಳುಹಿಸಲಾಗುತ್ತಿದೆ ತನಿಖೆ ಸಮಯದಲ್ಲಿ ಬೆಳಗಾವಿ ನಗರದ ವೃತ್ತ ಆರಕ್ಷಕ ನಿರೀಕ್ಷಕರು ಎಂಹೆಚ್ ಎಲ್ ೬೭೫೩ ಸಂಖ್ಯೆಯ ಒಂದು ಆಟೋದಲ್ಲಿ ಬಚ್ಚಿಡಲಾಗಿದ್ದ ಒಂದು ಸ್ಟೈನ್‌ಲೆಸ್ ಸ್ಟೀಲ್ ಭರಣಿಯಲ್ಲಿಟ್ಟಿದ್ದ ಜಿಲೆಟಿನ್ ಅಚ್ಚಾದಿತ ಸ್ಫೋಟಕ ವಸ್ತುಗಳನ್ನು ಒಳಗೊಂಡಿದ್ದ ಒಂದು ಕವರನ್ನು ಹಾಗೂ ಇತರ ಮಿಶ್ರಣಗಳನ್ನು ಆಟೋರಿಕ್ಷಾ ಸಹಿತ ವಶಪಡಿಸಿಕೊಂಡಿದ್ದಾರೆ. ಈ ಆಟೋರಿಕ್ಷಾ ಮತ್ತು ಮೇಲೆ ನಮೂದಿಸಿದ ಸ್ಫೋಟಕ ವಸ್ತುಗಳನ್ನು ಆಪಾದಿತರಾದ ಜೀವನ್ ಮಾಧವರಾವ್ ಹಳದ್‌ಕರ್ ಅವರಿಂದ ವಶಪಡಿಸಿಕೊಳ್ಳಲಾಗಿದೆ. ವಶಪಡಿಸಿಕೊಳ್ಳಲಾದ ಜಿಲೆಟಿನ್ ಇದ್ದ ಸ್ಟೈನ್‌ಲೆಸ್ ಸ್ಟೀಲ್ ಭರಣಿಯನ್ನು ಸಹ ಮಂಗಳೂರಿಗೆ ಸ್ಫೋಟಕ ತಜ್ಞರ ಅಭಿಪ್ರಾಯಕ್ಕಾಗಿ ಕಳುಹಿಸಲಾಗುತ್ತಿದೆ. ಈ ಪ್ರಕರಣದ ತನಿಖೆಯನ್ನು ಬೆಳಗಾವಿ ನಗರದ ವೃತ್ತ ಆರಕ್ಷಕ ನಿರೀಕ್ಷಕರು ಮುಂದುವರಿಸುತ್ತಿದ್ದಾರೆ.

(ii) ಗ್ರಹಣ ಚಿತ್ರಕ್ಕೆ ನೀಡಿದ ಚಿನ್ನದ ಪದಕದಲ್ಲಿ, ಚಿನ್ನದ ಪ್ರಮಾಣ ಕಡಿಮೆ ಇರುವುದು.

ಅಧ್ಯಕ್ಷರು.—ಮಾನ್ಯ ಆಳ್ವ ಅವರೇ, ತಾವು ಎನ್ನೆಯ ದಿವಸವ ೩೩೪ಕ್ಕೆ ಉತ್ತರ ಹೇಳುತ್ತೀರಾ ?

ಶ್ರೀ ಜೀವರಾಜ್ ಆಳ್ವ.—ಮಾನ್ಯ ಸದಸ್ಯರೂ ಮತ್ತು ಮಿತ್ರರಾದ ಉಮಾರಬ್ಬು ಅವರು...

ಅಧ್ಯಕ್ಷರು.—ಕಾಪೀಸ್ ಇದ್ದರೆ ಕೊಟ್ಟುಬಿಡಿ. ಪ್ರೆಸ್‌ನವರಿಗೆ ಹೋಗಲಿ. ಹೆಚ್ಚಿಗೆ ಮಾಡಿಸಿದ್ದಿರೋ ಇಲ್ಲವೋ ?

ಶ್ರೀ ಜೀವರಾಜ್ ಆಳ್ವ.—ಮಾಡಿಲ್ಲ, ಅದೇ ಹೇಳಂತಿದ್ದೇನೆ. ಅದನ್ನು ಓದಿ ಬಿಡುತ್ತೇನೆ.

ಅಧ್ಯಕ್ಷರು.—ದಯವಿಟ್ಟು ಇನ್ನು ಮುಂದೆ ಹೆಚ್ಚಿಗೆ ಕಾಪಿ ಮಾಡಿಸಿ, ಪ್ರೆಸ್ಸಿಗೆ ಹೋಯಿತು ಎಂದರೆ ನೀವು ಹೇಳಿದ್ದು ಪೇಪರ್‌ನಲ್ಲಿ ಬರುತ್ತದೆ.

ಶ್ರೀ ಜೀವರಾಜ್ ಆಳ್ವ.—ಹರ್ಷ ಪಿಕ್ಚರ್ಸ್‌ನವರು ತಯಾರಿಸಿದ 'ಗ್ರಹಣ' ಚಿತ್ರಕ್ಕೆ ಉತ್ತಮ ಚಲನಚಿತ್ರವೆಂದು ತೀರ್ಮಾನಿಸಿದಂತೆ ಚಿನ್ನದ ಪದಕವನ್ನು ನೀಡಲಾಗಿತ್ತು. ಚಿನ್ನದ ಪದಕವನ್ನು ದಿನಾಂಕ ೮-೫-೧೯೬೯ರಂದು ನಡೆದ ಚಲನಚಿತ್ರ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ನೀಡಲಾಗಿತ್ತು. ಆದರೆ ಅಪರ ಸಂಬಂಧಿತ ಪೈಕಿ ಕೋಡಿಹಳ್ಳಿ ಶಿವರಾಮ್‌ರವರು ನನ್ನ ಹತ್ತಿರ ಮೌಖಿಕವಾಗಿ ಚಿನ್ನದ ಪದಕದಲ್ಲಿ ಚಿನ್ನದ ಪ್ರಮಾಣವು ತುಂಬಾ ಕಡಿಮೆಯಾಗಿದ್ದು ಅದರಲ್ಲೇನೋ ಮೋಸ ಇದೆ ಎಂದು ದೂರು ನೀಡಿದ ಮೇರೆಗೆ ನಾನು ಜಂಟಿ ನಿರ್ದೇಶಕರನ್ನು ಕರೆಸಿ ಮೌಖಿಕವಾಗಿ ಇದನ್ನು ವಿಚಾರಿಸಲು ಹೇಳಿದೆ. ಆದರಂತೆ ಜಂಟಿ ನಿರ್ದೇಶಕರು ಚಿನ್ನದ ಪದಕವನ್ನು ಪರೀಕ್ಷಿಸಿ ನೋಡಿದಾಗ ಪದಕ ಭಾಗವು ೧೮ ಕ್ಯಾರಟ್ ಚಿನ್ನದಿಂದಲೂ ಅದಕ್ಕೆ ಅಂಟಿಸಿದ ಕೊಂಡಿಯಲ್ಲಿ ೧೩ ಕ್ಯಾರಟ್ ಚಿನ್ನವನ್ನೂ ಬಳಸಲಾಗಿತ್ತೆಂದು ಕಂಡು ಬಂದಿತು. ಇದನ್ನು ಕೋಡಿಹಳ್ಳಿ ಶಿವರಾಮ್‌ರವರಿಗೆ ತಿಳಿಸಲಾಗಿದೆ. ಈ ಸಂದರ್ಭದಲ್ಲಿ ಚಿನ್ನದ ಪದಕವನ್ನು ಕರಗಿಸುವ ಪೂರ್ವ ಮತ್ತು ಕರಗಿಸಿದ ನಂತರ ಇವರುಗಳ ಸಮಕ್ಷಮದಲ್ಲಿ ಪಂಚನಾಮೆ ಮಾಡಲಾಗಿತ್ತು. ಅಂದೇ ಪುನಃ ಎಲ್ಲರೂ ಸೇರಿ ಕರಗಿಸಿದ ಚಿನ್ನದ ತುಂಡನ್ನು ತೂಕ ಮಾಡಲಾಗಿ ಅದರ ತೂಕವು ಮೊದಲಿನಷ್ಟೇ ಇದ್ದುದು ಕಂಡುಬಂತು. ಆದರಂತೆ ಅಂದೇ ಸಂಜೆ ಅಧಿಕೃತ ಪರೀಕ್ಷಕರಾದ ಮೆಸರ್ಸ್ ಕೃಷ್ಣ ಅಂಡ್ ಕಂಪೆನಿ ಜ್ಯುಯಲರ್ಸ್ ಅವರ ಬಳಿಗೆ ಪರೀಕ್ಷೆಗೆ ತೆಗೆದುಕೊಂಡು ಹೋಗಲಾಯಿತು. ಅಂದು ರಾತ್ರಿಯಾಗಿರುವುದರಿಂದ ಮರುದಿನ ಬೆಳಿಗ್ಗೆ ೧೧-೩೦ ಗಂಟೆಗೆ ಮೆಸರ್ಸ್ ಕೃಷ್ಣ ಅಂಡ್ ಕಂಪೆನಿಯವರು ಬರಲು ತಿಳಿಸಿದರು. ಆದರಂತೆ ಅವರಲ್ಲಿಗೆ ಹೋಗಿ ಪರೀಕ್ಷೆ ಮಾಡಿದ ಬಗ್ಗೆ ಪ್ರಮಾಣಪತ್ರವನ್ನು ಪಡೆದುಕೊಂಡು ಬರಲಾಯಿತು. ಈ ಪ್ರಮಾಣ ಪತ್ರದಲ್ಲಿ ಕೃಷ್ಣ ಅಂಡ್ ಕಂಪೆನಿಯವರು ಚಿನ್ನದ ಪದಕದಲ್ಲಿ ೧೪ ಕ್ಯಾರಟ್ ಬಂಗಾರ ಇರುವುದೆಂದು ಮತ್ತು ಅದರ ತೂಕವು ೯೯.೪೫೫ ಗ್ರಾಮ್ಸ್ ಇರುವುದೆಂದು ದೃಢೀಕರಿಸಿರುತ್ತಾರೆ ಆದ್ದರಿಂದ ಒಂದೇ ಒಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇವರು ಹೇಳಿರುವುದರಿಂದ ಏನಾಗಿದೆ ಎಂದರೆ ಸರ್ಕಾರ ಕೊಟ್ಟಿರುವ ಪದಕ ಏನೋ ಲೋಪಯುಕ್ತವಾಗಿದೆ ಎಂದು ಎಲ್ಲರೂ ಪದಕ ಕರಗಿಸುವುದಕ್ಕೆ ಹೋಗುವಂಥ ಪರಿಸ್ಥಿತಿ ಬರುತ್ತದೆ. ಇದು ಶಾಸಕರಿಗೂ ಗೊತ್ತಿತ್ತು. ಈ ತರಹ ಆಗಿದೆಯೆಂದು ಕೋಡಿಹಳ್ಳಿ ಶಿವರಾಂ ಅವರಿಗೂ...ಒಂದು ವರ್ಷದ ಹಿಂದೆ ಈ ಪ್ರಶ್ನೆ ಬಂದು ಈ ಪ್ರಶ್ನೆ ಲ್ಯಾಪ್ಸ್ ಆಗಿತ್ತು. ಈ ತರಹದ ಟೀಕೆ ಮಾಡುವುದರಿಂದ ತೊಂದರೆಯಾಗುತ್ತದೆ. ಸುಮ್ಮಸುಮ್ಮನೆ ಅಪ್ರಾಮಾಣಿಕ ವಿಚಾರಗಳು ಬಂದಿರುವುದರಿಂದ ಅಧಿಕಾರಿಗಳ ಮೇಲೆ ಮತ್ತು ಅಕ್ಕಸಾಲಿಗರ ಮೇಲೆ ಇಲ್ಲದ ತೊಂದರೆಗಳು ಬಂದಿರುವುದರಿಂದ ಇಂಥ ಟೀಕೆಗಳು ಬರದೇ ಇದ್ದರೆ ಸಂತೋಷ ಎಂದು ತಮ್ಮ ಮೂಲಕ ಸಭೆಗೆ ತಿಳಿಸಲಿಕ್ಕೆ ಬಯಸುತ್ತೇನೆ.

ಅಧ್ಯಕ್ಷರು.—ಮತ್ತೊಂದು, ರಾಚಯ್ಯನವರೇ ಮಾಡಿ.

ಶ್ರೀ ಬಿ. ರಾಚಯ್ಯ (ಗೃಹಮಂತ್ರಿಗಳು).—ಶ್ರೀಮತಿ ಸುಮಂ ವಸಂತ ಅವರು ತಿಳಿಸಿರ ಪ್ರಕಾರ ಸೂಚನೆ ಕೊಟ್ಟಿದ್ದಾರೆ.

ಅಧ್ಯಕ್ಷರು.—ಕಾಪೀಸ್ ಇದ್ದರೆ ಕಳಿಸಿ. ಡಿಪಾರ್ಟ್‌ಮೆಂಟಿನವರಿಗೆ ಹೇಳಿ ಹೆಚ್ಚಿಗೆ ಕಾಪಿ ಮಾಡಿಸಿ.

ಶ್ರೀ ಬಿ. ರಾಚಯ್ಯ.—ಕಾಪಿಗಳಿಲ್ಲ. ಮಾಡಿಸಿ ಕೊಡುತ್ತೇನೆ. ಮಾನ್ಯ ಸದಸ್ಯರಿಲ್ಲ. ಅವರು ಬಂದಾಗ ಹೇಳಿಕೆ ಕೊಡುತ್ತೇನೆ,

ಅಧ್ಯಕ್ಷರು.—ಓದಿ ಹೇಳಿ.

ಶ್ರೀ ಬಿ. ರಾಚಯ್ಯ.—ಅವರು ಇಲ್ಲ, ಬಂದಾಗಲೇ ಹೇಳಿಕೆ ಕೊಡುತ್ತೇನೆ. ಆಕ್ಷೇಪಣೆ ಮಾಡುವುದು ಬೇಡ.